ಶ್ರೀ ಎಂ. ವೀರಪ್ಪ ಮೊಯಿಲಿ : ಇಷ್ಟೆಲ್ಲಾ - ಮಾಡಿ ಕುಡಿಯಲು ನೀರು ಬರುತ್ತದೆಯೇ ಎಂಬುದನ್ನು ಆಲೋಚನೆ ಮಾಡಬೇಕು. ತಮಗೆ ಗೊತ್ತಿದೆ ಅನೇಕ ಯೋಜನೆಗಳು ಮಾಡಿ ಅದ ಮೇಲೆ ಫೈಲ್ ಆಗಿವೆ. ಏಕೆಂದರೆ ನಾವು ಇದಕ್ಕೆ 18 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಏನಾದರೂ ಉರಿನವರಿಗೆ ಪ್ರಯೋಜನವಾಗುವುದಿದ್ದರೆ ಅದೂ ಮಾಡಬಹುದು ಇದರ ಪರಿಸ್ಥಿತಿ ನೋಡಿದರೆ ಕೊನೆಗೆ ಅದು ಬಿಳಿ ಆನೆ ಆಗಬಹುದು. ಈ ರೀತಿ ವೈಟ್ ಎಲಿಫೆಂಟ್ ಅದರೆ ಜನಗಳಿಗೆ ಏನು ಪ್ರಯೋಜನ? 18 ಕೋಟಿ ರೂಪಾಯಿಗಳನ್ನು ಬೇರೆ ರೀತಿ ಖರ್ಚು ಮಾಡಿದರೆ ಬಹುಶಃ 50 ಗ್ರಾಮಗಳಿಗೆ ಕುಡಿಯುವನೀರು ಕೊಡಬಹುದು. ಅದೆಲ್ಲಾ ಆಲೋಚನೆ ಮಾಡೋಣ. 3 ಗ್ರಾಮಕ್ಕೆ ನೀರು 18 ಕೋಟಿ ರೂಪಾಯಿ ಕೊಟ್ಟರೆ ಅದರಿಂದಲೇ ಇಡೀ ನಿಮ್ಮ ಕ್ಷೇತ್ರಕ್ಕೆ ನೀರು ಸರಬರಾಜು ಆಗುವುದಿದ್ದರೆ ಅದನ್ನು ಉಪಯೋಗ ಮಾಡೋಣ ಆದ್ದರಿಂದ ನಾನು ಅದನ್ನು ತೆಗೆದು ಹಾಕಿಲ್ಲ ಬಹಳ ವಿಶೇಷ ಕಳಕಳಿಯಿಂದ ತಮ್ಮನ್ನು ಕರೆದು ಇದಕ್ಕೆ ಒಂದು ಪರಿಹಾರ ಹುಡುಕೋಣ ಯಾವ ಸಮಸ್ಯೆಗೆ ಅದರೂ ಪರಿಹಾರ ಇದ್ದೇ ಇದೆ. ಆದಷ್ಟು ಜಾಗ್ರತೆ ನಾನು ತಮ್ಮನ್ನು ಕರೆದು ಪರಿಹಾರ ಕೊಡುತ್ತೇನೆ.

ಮುಂಡರಗಿ ತಾಲ್ಲೂಕು ಡಂಬಳದಲ್ಲಿ ಯುವಕ ಮಂಡಳ ಕಟ್ಟಡ ನಿರ್ಮಾಣ

481 - ಶ್ರೀ ಕೆ. ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಪ್ರವಾಸೋದ್ಯಮ ಹಾಗೂ ಯುವಜನ ಸೇವಾಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕು ಡಂಬಳದಲ್ಲಿ ಯುವಜನ ಮಂಡಲ ಅರ್ಧಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಓಂ ಪ್ರಕಾಶ್ ಕಣಗಲಿ (ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಕ್ರೀಡಾ ರಾಜ್ಯ ಸಚಿವರು) :

ಅ) ಹೌದು

ಆ) ಇಲಾಖಾ ವತಿಯಿಂದ ಸದರಿ ಸಂಘಕ್ಕೆ 84-85ನೇ ಸಾಲಿನಲ್ಲಿ ರೂ. 5,000-00ಗಳ ಕಟ್ಟಡ ಕಟ್ಟಲು ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಕಟ್ಟಡ ಕಟ್ಟಲು ನಿವೇಶನದ ತೊಂದರೆಯಿಂದ ಕಟ್ಟಡ ನಿರ್ಮಾಣ ಮಾಡಲು ಸಾಧ್ಯವಾಗಿರುವುದಿಲ್ಲ. ಆದರೂ ಸದರಿ ಯುವಕ ಮಂಡಲಕ್ಕೆ ನಿವೇಶನ ಪಡೆಯುವಲ್ಲಿ ಸೂಕ್ತ ಮಾರ್ಗದರ್ಶನವನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ನೀಡಲಾಗುವುದು.

ಶ್ರೀ ಕೆ.ಎಚ್. ಕುರಡಗಿ : ಉತ್ತರದೊಳಗೆ ಜಾಗ ಕೊಟ್ಟಿಲ್ಲ ಎಂದು ಹೇಳಿದ್ದೀರಿ. ಜಾಗ ಕೊಟ್ಟು 5000 ರೂ. ದೊಳಗೆ ಕಟ್ಟಡ ಅರ್ಧಕ್ಕೆ ನಿಂತಿದೆ ಇದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಓಂ ಪ್ರಕಾಶ್ ಕಣಗಲಿ : ಅಧ್ಯಕ್ಷರೇ, ಸ್ವಾಯತ್ತ ಸಂಸ್ಥೆ. ಅದಕ್ಕೆ ನಾವು ಸಹಾಯಧನ ಎಂದು 5000 ರೂ ಕೊಟ್ಟಿದ್ದೇವೆ. ಕಟ್ಟಡವಾಗಲಿ, ಸೈಟಾಗಲಿ ಅದನ್ನು ಅವರೆ ಮಾಡಿಕೊಳ್ಳಬೇಕು, ಅದು ನಮ್ಮಿಂದಾಗುವುದಿಲ್ಲ.

ಶ್ರೀ ಕೆ.ಎಚ್. ಕುರಡಗಿ : ಸೈಟ್ ಕೊಟ್ಟಿದ್ದೇವೆ, ಬಿಲ್ಡಿಂಗ್ ಅರ್ಧಕ್ಕೆ ನಿಂತಿದೆ, ಇನ್ನಷ್ಟು ಹಣ ಕೊಡುತ್ತೀರಾ?

ಶ್ರೀ ಓಂ ಪ್ರಕಾಶ್ ಕಣಗಲಿ : ಈಗಾಗಲೇ 5 ಸಾವಿರ ರೂ ಕೊಟ್ಟಿದ್ದೇವೆ.

ಅಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ದಿನಾಂಕ 30-8-94ರಂದು ಲಿಖಿತ ಮೂಲಕ ಉತ್ತರಿಸುವ 4ನೇ ಪಟ್ಟಿಯಲ್ಲಿರುವ 77 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಮೂಲ್ಕಿ ಪೋಲೀಸ್ ಸ್ಟೇಷನ್ನಿನ ಜೀಪಿನ ಬಗ್ಗೆ

561 - ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳೆದ ಅಧಿವೇಶನದಲ್ಲಿ ಏಪ್ರಿಲ್ 1994ರ ಮೊದಲು ಮೂಡಬಿದಿರೆ-ಮೂಲ್ಕಿ ಸ್ಟೇಷನ್ನಿಗೆ ಜೀಪು ಒದಗಿಸಲಾಗುವುದೆಂದು ಸರ್ಕಾರದವರು ಆಶ್ವಾಸನೆ ನೀಡಿದ್ದು ನಿಜವೇ?*

ಆ) *ಹಾಗಿದ್ದಲ್ಲಿ ಈ ತನಕ ಜೀಪು ಒದಗಿಸದಿರಲು ಕಾರಣವೇನು? ಹಾಗೂ ಎಂದು ಒದಗಿಸಲಾಗುವುದು?*

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಹೌದು

ಆ) ಮೂಲ್ಕಿಯು ಸರ್ಕಲ್ ಪೋಲೀಸ್ ಕಛೇರಿ ಹಾಗೂ ಪೋಲೀಸ್ ಠಾಣೆ ಹೊಂದಿರುತ್ತದೆ. ಸರ್ಕಲ್‌ಗೆ ಜೀಪು ಒದಗಿಸಲಾಗಿದ್ದು, ಪೋಲೀಸ್ ಠಾಣೆಗಳಾದ ಮೂಡಬಿದಿರೆ-ಮೂಲ್ಕಿಗೆ ಮೋಟಾರ್ ಸೈಕಲ್‌ಗಳನ್ನು ಒದಗಿಸಲಾಗಿದೆ. ಈ ಪೋಲೀಸ್ ಠಾಣೆಗಳಿಗೆ ಮುಂಬರುವ ವರ್ಷಗಳಲ್ಲಿ ಹಣ ಒದಗಿಸಿಕೊಂಡು ಆದ್ಯತೆ, ಅಗತ್ಯತೆಯನ್ನು ಅನುಸರಿಸಿ ಜೀವನ್ನು ಒದಗಿಸಲಾಗುವುದು.

ಮುಖ್ಯಮಂತ್ರಿಯವರ ವಿದೇಶಿ ಪ್ರವಾಸದ ಬಗ್ಗೆ

559 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಹಾಲಿ ಮುಖ್ಯಮಂತ್ರಿಯವರು ಇತ್ತೀಚೆಗೆ ಅಮೇರಿಕಾಕ್ಕೆ ನೀಡಿದ ಭೇಟಿ ಅಧಿಕೃತವೇ ಅಥವಾ ಖಾಸಗಿಯೇ ಇವರೊಡನೆ ಹೋಗಿದ್ದವರು ಯಾರು ಯಾರು ಈ ಪ್ರವಾಸದಿಂದ ಸರ್ಕಾರಕ್ಕೆ ಆದ ವೆಚ್ಚ ಎಷ್ಟು?*

ಆ) *ಇವರು ಭೇಟಿಯಾದ ಪ್ರಮುಖ ವ್ಯಕ್ತಿಗಳು ಅಥವಾ ಸಂಸ್ಥೆಗಳು ಯಾವುವು, ಚರ್ಚಿಸಿದ ವಿಷಯಗಳು ಯಾವುವು, ಅವುಗಳ ಫಲಶ್ರುತಿಯೇನು ಹಾಗೂ ವಾಪಸ್ಸಾದ ನಂತರ ಈ ವಿಷಯಗಳಲ್ಲಿ ಆಗಿರುವ ಬೆಳವಣಿಗೆಗಳು ಏನು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಇದು ಒಂದು ಖಾಸಗಿ ಭೇಟಿಯಾಗಿದ್ದು, ನನ್ನ ಜೊತೆ ನನ್ನ ಪತ್ನಿಯವರು ಪ್ರವಾಸ ಮಾಡಿದ್ದಾರೆ. ಇದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ಖರ್ಚಾಗಿಲ್ಲ.

ಆ) ಪ್ರವಾಸವು ಖಾಸಗಿಯಾಗಿದ್ದರೂ ಸಹ ರಾಜ್ಯದ ಹಿತ ದೃಷ್ಟಿಯ ಸಲುವಾಗಿ ಪ್ರಯತ್ನ ಮಾಡಲಾಗಿದೆ. ರಾಜ್ಯದ ವಿವಿಧ ಯೋಜನೆಗಳಿಗೆ ಅತ್ಯಾವಶ್ಯಕವಾಗಿರುವ ಬಂಡವಾಳ ಹೂಡಿಕೆ ಬಗ್ಗೆ ಮತ್ತು ತಂತ್ರಜ್ಞಾನದ ಬಗ್ಗೆ ಅಮೇರಿಕ ದೇಶದ ಕೆಲವು ಪ್ರತಿಷ್ಠಿತ ಕಂಪೆನಿ ಸಂಸ್ಥೆಗಳ ಮುಖ್ಯಸ್ಥರುಗಳೊಂದಿಗೆ ಭೇಟಿಯನ್ನು ಈ ಪ್ರವಾಸ